ವಿಷಯ: ಭಟ್ಕಳ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆ ಉತ್ತಮಗೊಳಿಸುವುದು.

2567 (3622)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಪುರಸಭೆಯ ಆಡಳಿತ ವೈಖರಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಪುರಸಭೆಯ ವ್ಯಾಪ್ತಿಯಲ್ಲಿರುವ ಒಳಚರಂಡಿ ವಿಫಲತೆಗೆ ಯಾರು ಜವಾಬ್ದಾರರು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಭಟ್ಕಳ ಪುರಸಭೆಯ ಒಳಚರಂಡಿ ಯೋಜನೆಯನ್ನು 1972ರಲ್ಲಿ ಭಟ್ಕಳದ 15-20, ಸಾವಿರ ಜನ ಸಂಖ್ಯೆಯನ್ನು ಆಧರಿಸಿ ರೂಪಿಸಿದ್ದು ಇಂದಿನ ಜನಸಂಖ್ಯೆ ಅಂದಾಜು 35 ಸಾವಿರ ಜನಸಂಖ್ಯೆಯ ಒತ್ತಡವನ್ನು ಭರಿಸಲಾಗುತಿಲ್ಲ. ಸದರಿ ಒಳಚರಂಡಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕಾರ್ಯಗತಗೊಳಿಸಿದ್ದು, ಕಾಮಗಾರಿಯ ಗುಣಮಟ್ಟವು ಕಳಪೆ ಮಟ್ಟದ್ದಾಗಿರುವುದು ಕಂಡುಬಂದಿದೆ. ಈ ಯೋಜನೆಯು ಸಂಪೂರ್ಣವಾಗಿ ಪೂರ್ತಿಯಾಗದೇ ಇದ್ದಾಗ್ಯೂ ಪುರಸಭೆಯವರು ನಾಗರೀಕರಿಗೆ ಒಳಚರಂಡಿ ಬಳಕೆಗೆ ಅನುಮತಿ ನೀಡಿರುವುದು ಒಳಚರಂಡಿಯ ವಿಫಲತೆಗೆ ಕಾರಣವಾಗಿದೆ.

ವಿಷಯ: ಕಬ್ಬಿನ ಬೆಳೆಗಾರರಿಗೆ ಸಾಗಾಣಿಕೆಗೆ ಸಹಾಯಧನ ಬಿಡುಗಡೆ.

2568 (3981)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಸಾಲಿನಲ್ಲಿ ಕಬ್ಬು ಬೆಳೆಗಾರರಿಗೆ ಪ್ರಕಟಿಸಿದ ಸಹಾಯಧನಗಳು ಯಾವುವು;

ಆ) ಪ್ರಕಟಿಸಿದ ಎಲ್ಲಾ ಸಹಾಯಧನವನ್ನು ರೈತರಿಗೆ ಸರ್ಕಾರ ಕೊಟ್ಟಿದೆಯೇ?

ಇ) ಇಲ್ಲಿದಿದ್ದಲ್ಲಿ ಕಾರಣವೇನು? ಎಷ್ಟು ಹಣ ಬಿಡುಗಡೆಯಾಗಬೇಕಾಗಿದೆ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):

ಅ) 1995-96ನೇ ಸಾಲಿಗೆ ಸಂಬಂಧಿಸದಂತೆ ಸದರಿ ಸಾಲಿನಲ್ಲಿ ಹೆಚ್ಚುವರಿ ಕಬ್ಬಿನ ಸಮಸ್ಯೆ ಇದುದ್ದರಿಂದ ರೈತರಿಗೆ ನೆರವಾಗುವ ದೃಷ್ಟಿಯಿಂದ ಕೊರತೆ ಕಬ್ಬು ಅನುಭವಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಕಬ್ಬು ದೊರಕುವ ಪ್ರದೇಶದಿಂದ ಕಬ್ಬನ್ನು ತಂದು ಸುರಿಸಿದಲ್ಲಿ ಅಂತಹ ಕಬ್ಬಿಗೆ ಟನ್ ಒಂದಕ್ಕೆ ಕಿ.ಮೀ ಒಂದಕ್ಕೆ (250 ಕಿ.ಮೀ ಮೀರದಂತೆ) 0.50 ಪೈಸೆಯಂತೆ ಸಾಗಾಣಿಕೆ ಸಹಾಯಧನವನ್ನು ಸರ್ಕಾರ ಘೋಷಿಸಿದೆ.

ಆ) ಇಲ್ಲಾ.

ಇ) ಇನ್ನೂ ರೂ.245.71 ಲಕ್ಷ ಬಿಡುಗಡೆ ಆಗಬೇಕಾಗಿದೆ ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ವಿಶ್ವಬ್ಯಾಂಕ್ ನೆರವಿನಿಂದ ನಿರ್ಮಿಸಿದ ಬಿತ್ತನೆ ಕೊಠಡಿಗಳಲ್ಲಿ ರೇಷ್ಮೆ ಮೊಟ್ಟೆಗಳ ಉತ್ಪಾದನೆ.

2569 (3418)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಿವೆ? ಇವುಗಳಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ನಿರ್ಮಿಸಿದ ಬಿತ್ತನೆ ಕೊಠಡಿಗಳಲ್ಲಿ ಉದ್ದೇಶಿತ ಸಾಮರ್ಥ್ಯದ ರೇಷ್ಮೆ ಮೊಟ್ಟೆಗಳು ಉತ್ಪಾದಿಸಲು ಎಷ್ಟು ಬಿತ್ತನೆ ಕೋಠಿಗಳಲ್ಲಿ ಸಾಧ್ಯವಾಗಿದೆ.

ಆ) 1992 ನಂತರ ಎಷ್ಟು ಖಾಸಗಿ ಬಿತ್ತನೆ ಕೊಠಡಿಗಳಿಗೆ ಅನುಮತಿ ನೀಡಲಾಗಿದೆ. ತಾಲ್ಲೂಕುವಾರು ವಿವರ ನೀಡುವುದು.

ಇ) ಮಾದರಿ ಬಿತ್ತನೆ ಕೊಠಡಿಗಳಲ್ಲಿ ಶೈತ್ಯಾಗಾರಗಳನ್ನು ಅಳವಡಿಸಲು ವೆಚ್ಚ ಮಾಡಿದ ಹಣ ಎಷ್ಟು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡಲು ಮಾಡುತ್ತಿರುವ ವೆಚ್ಚ ಎಷ್ಟು?

ಶ್ರೀ ಎಂ.ವರದೇಗೌಡ (ರೇಷ್ಮೆ ರಾಜ್ಯ ಸಚಿವರು).

ಅ) ರಾಜ್ಯ - 96

ಕೇಂದ್ರ - 7

ಒಟ್ಟು: 103

ಯಾವುದರಲ್ಲೂ ಸಾಧ್ಯವಾಗಿರುವುದಿಲ್ಲ.